# ಲೈಫ್‌ಸೆಲ್ ಬ್ಯಾಂಕಿಂಗ್

ಬೆಂಗಳೂರು,ಅ.21: ಲೈಫ್‌ಸೆಲ್ ಇಂಟರ್‌ನ್ಯಾಷನಲ್ ತನ್ನ 5 ವರ್ಷದ ವಾರ್ಷಾಚರಣೆಯ ಅಂಗವಾಗಿ ಸ್ಟೆಮ್ ಸೆಲ್ ಬ್ಯಾಂಕಿಂಗ್ ಸೌಲಭ್ಯವನ್ನು ಆರಂಭಿಸಿದೆ.

ಕಂಪನಿ ಭಾರತದಾದ್ಯಂತ ತನ್ನ ಕಾರ್ಡ್ ಟಿಶ್ಯೂ ಗ್ರಾಹಕರಿಗಾಗಿ ಬೇಬಿಕಾರ್ಡ್ ಪ್ರೊ 1 ಎಂ ಮತ್ತು 50 ಎಂ ಎಂಬ ಹೊಸ ಮೌಲ್ಯವರ್ಧಿತ ಸೇವೆಗಳನ್ನು ಕೂಡ ನೀಡಲಿದೆ. ಸಾಮಾನ್ಯ ಜನರಿಗೆ ಈ ಸೌಲಭ್ಯ ದೊರೆಯುವ ದೃಷ್ಟಿಯಿಂದ ಸ್ಟೆಮ್ ಸೆಲ್ ಬ್ಯಾಂಕಿಂಗ್ ಸೌಲಭ್ಯ ಒದಗಿಸುತ್ತಿದೆ ಎಂದು ಲೈಫ್‌ಸೆಲ್‌ನ ಕಾರ್ಯನಿರ್ವಾಹಕ ನಿರ್ದೇಶಕ ಮಯೂರ್ ಅಭಯ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ಹೊಸ ಕೌಶಲ್ಯದ ಪ್ರಕಾರವಾಗಿ ಕಾರ್ಡ್ ಬ್ಲಡ್ ಸ್ಟೆಮ್ ಸೆಲ್ ಬ್ಯಾಂಕಿಂಗ್‌ನ ವಾರ್ಷಿಕ ಸಂಗ್ರಹ ವೆಚ್ಚವನ್ನು 79 ಸಾವಿರದಿಂದ 59 ಸಾವಿರಕ್ಕೆ ಇಳಿಸಲಾಗಿದೆ. ಅಲ್ಲದೆ ಪ್ರತಿ ತಿಂಗಳು 2 ಸಾವಿರ ರೂ. ಗಳನ್ನು ವಾರ್ಷಿಕ ಶುಲ್ಕವನ್ನು ನೀಡಿ ತಮ್ಮ ಮಕ್ಕಳ ಕಾರ್ಡ್ ಬ್ಲಡ್ ಸೆಲ್ ಅನ್ನು 20 ವರ್ಷಗಳ ತನಕ ಕಾಪಾಡಬಹುದಾಗಿದೆ ಎಂದು ತಿಳಿಸಿದರು.

ಭಾರತ ಮತ್ತು ವಿದೇಶದಲ್ಲಿ ಲೈಫ್‌ಸೆಲ್ 50 ಕೇಂದ್ರಗಳನ್ನು ಹೊಂದಿದ್ದು, ಮಹಿಳೆಗಾಗಿ ಮೆನ್‌ಸ್ಟ್ರುಯಲ್ ಬ್ಲಡ್ ಸ್ಟೆಮ್ ಸೆಲ್ ಬ್ಯಾಂಕಿಂಗ್‌ನ ಮತ್ತೊಂದು ಸೇವೆಯನ್ನು ಮುಂಬರುವ ದಿನಗಳಲ್ಲಿ ಪ್ರಾರಂಭಿಸಲಾಗುತ್ತದೆ. ಇದು ಭವಿಷ್ಯದಲ್ಲಿ ಎದುರಾಗುವ ಮಾರಣಾಂತಿಕ ರೋಗಗಳಿಗೆ ರಕ್ಷಣೆ ನೀಡಲಿದೆ ಎಂದರು.